## ಬುತ್ತಿ ಚಿಗುರು

### ಹೆಂಡತಿಯ ಕರೆ...



ದೀಪಾವಳಿ ರಜೆಗೆ ಏಕಾಂಗಿಯಾಗಿ ಊರಿಗೆ ಹೋಗಿದ್ದ ಹರೀಶನಿಗೆ ಬೆಳಗ್ಗೆ ಫೋನ್ ಕರೆ ಬಂತು.

ಒಂದೇ ಸಮನೆ ಅಳುತ್ತಿದ್ದ ಆಕೆ ಆತನಲ್ಲಿ ಕ್ಷಮೆ ಯಾಚಿಸಿದಳು. ಸೊರಸೊರ ಎನ್ನುತ್ತಿದ್ದ ಮೂಗು ಮತ್ತು ಕಣ್ಣೀರು ಒರೆಸುತ್ತಾ ಆಕೆ ಮುಂದುವರಿಸಿ ಅರುಹಿದಳು, 'ನಿಮ್ಮಲ್ಲಿ ಇನ್ನೆಂದೂ ಜಗಳವಾಡುವುದಿಲ್ಲ; ನಿಮ್ಮೆಲ್ಲಾ ಮಾತುಗಳನ್ನೂ ಕೇಳುತ್ತೇನೆ; ನೀವು ಆದೇಶಿಸಿದ ಕೆಲಸಗಳನ್ನೆಲ್ಲಾ ಮಾಡುತ್ತೇನೆ...'

ಇವೆಲ್ಲವನ್ನೂ ಆಲಿಸಿ ಹರೀಶನ ಹೃದಯವೂ ತುಂಬಿ ಬಂತು. ಆತ ಮನದೊಳಗೇ ಅಂದುಕೊಂಡ, 'ಪಾಪ ಯಾರ ಹೆಂಡತಿಯೋ ಏನೋ, ರಾಂಗ್ ನಂಬರ್ ಆಗಿತ್ತು. ಆದರೆ ಒಂದಂತೂ ನಿಜ. ಕೇಳಿ ಮನಸ್ಸು ತುಂಬಾ ಹಗುರವಾಗಿ ಹಕ್ಕಿಯಂತೆ ಹಾರಾಡಿತು!'

**ರಮಣ್ ಶೆಟ್ಟಿ ರೆಂಜಾಳ**

---



### ಟೀಚರ್ ಸರಿಯಿಲ್ಲ!

ಪುಟ್ಟಣ್ಣ: ಅಲ್ಲಾ ಕಣೇ ಪುಟ್ಟಿ, ನಮ್ಮ ಟೀಚರ್ ಯಾಕೋ ಸರಿಯಿಲ್ಲ ಅನ್ಸುತ್ತೆ.

ಪುಟ್ಟಕ್ಕ: ಯಾಕೋ ಪುಟ್ಟಣ್ಣ? ಏನಾಯಿತು ಕ್ಲಾಸಿನಲ್ಲಿ?

ಪುಟ್ಟಣ್ಣ: ನಮ್ಮ ಟೀಚರ್ ಬಂದ ತಕ್ಷಣ ಚಾಕ್‌ಪೀಸ್ ತಗೊಂಡು ಬೋರ್ಡ್ ಮೇಲೆ, 'ಶ್ರೀ ರಾಮಾಯಣ ದರ್ಶನಂ' ಅಂತ ತಾವೇ ಬರೆದ್ಬಿಟ್ಟು, ಆಮೇಲೆ ನಮ್ಮ ಹತ್ತಿರ, 'ಮಕ್ಕಳೇ ಹೇಳಿ 'ಶ್ರೀ ರಾಮಾಯಣ ದರ್ಶನಂ' ಯಾರು ಬರೆದದ್ದು ಅಂತ ಕೇಳ್ತಾರೆ!. ಅದಕ್ಕೆ ನಾನು ಹಾಗೆ ಹೇಳಿದ್ದು' ಎಂದನು.

ಪುಟ್ಟಕ್ಕ: ಹೋ ಹೌದಾ. ಅವರೇ ಬರೆದು, ಅವರೇ ಪ್ರಶ್ನೆ ಕೇಳೋದಾ...? ಎಂದು ಮೂಗಿನ ಮೇಲೆ ಬೆರಳಿಟ್ಟಳು.

**ವಿ. ವಿಜಯೇಂದ್ರ ರಾವ್**